489 (845) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಾದೇಶಿಕ ಅಸಮತೋಲನದ ಬಗ್ಗೆ ಡಾ॥ ಡಿ.ಎಂ. ನಂಜುಂಡಪ್ಪ ಸಮಿತಿಯ ಶಿಫಾರಸ್ಸಿನ ಅನ್ವಯ ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗುವುದು.

ಆ) ಈ ಸಾಲಿನಲ್ಲಿ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸುವ ಸಲುವಾಗಿ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದೆ;

ಇ) ಈ ಸಾಲಿನಲ್ಲಿ ಔರಾದ್ ವಿಧಾನಸಭಾ ಕ್ಷೇತ್ರದ ಯಾವ ಯಾವ ಗ್ರಾಮಗಳಲ್ಲಿ ಹೊಸ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಮತ್ತು ಆ) ಬೀದರ್ ಜಿಲ್ಲೆಯ ಈ ಕೆಳಕಂಡ 04 ಬ್ಲಾಕ್‌ಗಳನ್ನು ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳೆಂದು ಗುರುತಿಸಲಾಗಿದೆ:–

1) ಔರಾದ್
2) ಬಸವಕಲ್ಯಾಣ
3) ಬೀದರ್
4) ಹುಮ್ನಾಬಾದ್

ಮೇಲಿನ 4 ಬ್ಲಾಕ್‌ಗಳಲ್ಲಿನ ಈ ಕೆಳಕಂಡ ಸ್ಥಳಗಳಿಗಾಗಿ ಹೊಸ ಸರ್ಕಾರಿ ಪ್ರೌಢಶಾಲೆಗಳ ಮಂಜೂರಾತಿಗಾಗಿ ಪ್ರಸ್ತಾವನೆ ಬಂದಿದೆ:–

1) ಔರಾದ್ ಉತ್ತರ:– 1. ಎಕಲೂರ 2. ಚಿಮ್ಮೆಗಾಂವ
2) ಬೀದರ್ ಉತ್ತರ:– 1. ಗಾಡಗಿ 2. ಬುದೇರ
3) ಬಸವಕಲ್ಯಾಣ ಉತ್ತರ– 1. ಯಕ್ಕಂಬಾ
4) ಹುಲಸೂರು ಮತಕ್ಷೇತ್ರ:– 1. ದಮ್ಮೂರು
   2. ಕುಮಾರ ಚಿಂಚೋಳಿ
5) ಹುಮ್ನಾಬಾದ್ ಉತ್ತರ:– 2. ಕಪ್ಪರಗಾಂವ
   2. ಬಲದೇರಾ
6) ಭಾಲ್ಕಿ ಉತ್ತರ:– 1. ಮಾಸಿಮಾಡ

ಇ) ಔರಾದ್ ವಿಧಾನ ಸಭಾ ಕ್ಷೇತ್ರ ಎಕಲೂರ ಮತ್ತು ಚಿಮ್ಮೆಗಾಂವ ಗ್ರಾಮಗಳಿಗೆ ಹೊಸ ಸರ್ಕಾರಿ ಪ್ರೌಢಶಾಲೆ ಮಂಜೂರಾತಿ ಕೋರಿ ಪ್ರಸ್ತಾವನೆ ಬಂದಿರುತ್ತದೆ. 2006–07ನೇ ಸಾಲಿಗೆ ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.